**<u>ದಿನಾಂಕ 10.08.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀಸವಾಲುಃ ಶ್ರೀ ಎಂ ಡಿ ವಾದಿ ಪರ ವಕೀಲರುಃ</u>**

5 ನೇ ಪ್ರತಿವಾದಿಯ ತಾಯಿ ವಿಶಾಲಾಕ್ಷಮ್ಮ ತೀರಿಕೊಂಡಿರುತ್ತಾರೆ ಎಂದರೆ ಸರಿ. ನಾನು ಸುಮಾರು 50 ವರುಷದಿಂದ ಕಿರುಗಾವಲಿನಲ್ಲಿ ವಾಸವಾಗಿರುತ್ತೇನೆ. ವಾದಿ 2016 ರಲ್ಲಿ ಈ ದಾವೆ ದಾಖಲಿಸುವ ಪೂರ್ವದಲ್ಲಿ ನನಗೆ ದಾವಾ ಆಸ್ತಿಯಲ್ಲಿ ಭಾಗಬೇಕು ಅಂತ ನೋಟಿಸು ಕಳುಹಿಸಿದ್ದರು ಎಂದರೆ ಸರಿ. ಸದರಿ ನೋಟಿಸು ನನಗೆ ಮತ್ತು ಇತರ ಪ್ರತಿವಾದಿಯರಿಗೆ ಜಾರಿಯಾಗಿರುತ್ತದೆ ಎಂದರೆ ಸರಿ. ನಿಪಿ 10 ರ ಮೇಲಿರುವ ಸಹಿ ನನ್ನದೇ ಎಂದರೆ ಸರಿ. ಸದರಿ ನೋಟಿಸು ತಲುಪಿದ ನಂತರ ನಾನು ಉತ್ತರಿಸಿರುವುದಿಲ್ಲ. ನೋಟಿಸು ತಲುಪಿದ 2 ವರುಷದ ನಂತರ ಈ ದಾವೆಯನ್ನು ವಾದಿ ದಾಖಲಿಸಿದ್ದು ಅಲ್ಲಿಯವರೆಗೂ ನಾನು ನೋಟಿಸ್ಸಿಗೆ ಉತ್ತರಿಸಿರುವುದಿಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ ನನಗೆ ನ್ಯಾಯಾಲಯದಿಂದ ಸಮನ್ಸ್ ಬಂದಿತ್ತು ಎಂದರೆ ಸರಿ. ನಾನು ಸದರಿ ಸಮನ್ಸ್ ಮೇರೆಗೆ ನ್ಯಾಯಾಲಯಕ್ಕೆ ಹಾಜರಾಗದ ಕಾರಣ ನನ್ನ ವಿರುದ್ಧ ಏಕತರ್ಫಿ ಆದೇಶವಾಗಿರುತ್ತದೆ ಎಂದರೆ ಸರಿ. ನಾನು 10 ನೇ ತರಗತಿವರೆಗೆ ಓದಿದ್ದು ನನ್ನ ಸಹಿಯನ್ನು ಆಂಗ್ಲ ಭಾಷೆಯಲ್ಲಿ ಮಾಡುತ್ತೇನೆ. ಏಕಪಕ್ಷೀಯ ಅದೇಶ ಆದ 4 ವರುಷದ ನಂತರ ನಾನು ನ್ಯಾಯಾಲಯಕ್ಕೆ ನಮ್ಮ ವಕೀಲರ ಮುಖಾಂತರ ಹಾಜರಾಗಿರುತ್ತೇನೆ ಎಂದರೆ ಸರಿ. ನಾನು ಮೊದಲ ಬಾರಿಗೆ

ವಿಲ್ ನ್ನು ನಮ್ಮ ತಾಯಿ 1 ನೇ ಪ್ರತಿವಾದಿಗೆ ಬರೆದಿರುತ್ತಾರೆ ಎಂದು ನಾನು ದಾಖಲಿಸಿರುವ ಪ್ರತಿವಾದ ಪತ್ರದಲ್ಲಿ ಮೊದಲಬಾರಿ ಹೇಳಿದ್ದು ಅದಕ್ಕೂ ಮೊದಲು ಹೇಳಿರುವುದಿಲ್ಲ ಎಂದರೆ ಸರಿ. ಏಕಪಕ್ಷೀಯ ಆದೇಶವಾಗಿದ್ದನ್ನು ನನಗೆ ನನ್ನ ತಂಗಿ ನಾಗರತ್ನ ಹೇಳಿರುತ್ತಾರೆ. ಸದರಿ ನಾಗರತ್ನ 4 ನೇ ಪ್ರತಿವಾದಿ ಇದ್ದು ಅವರೂಕೂಡಾ ಈ ಪ್ರಕರಣದಲ್ಲಿ ಹಾಜರಾಗಿರುವುದಿಲ್ಲ ಎಂದರೆ ಸರಿ. ನನ್ನ ಪ್ರತಿವಾದ ಪತ್ರದಲ್ಲಿ 4 ನೇ ಪ್ರತಿವಾದಿಯಿಂದ ನನಗೆ ಏಕಪಕ್ಷೀಯ ಆದೇಶದ ವಿಷಯ ಗೊತ್ತಾದ ಬಗ್ಗೆ ಹೇಳಿರುವುದಿಲ್ಲ. 4 ನೇ ಪ್ರತಿವಾದಿ ಈಗ ಬೆಂಗಳೂರಿನಲ್ಲಿ ವಾಸವಾಗಿದ್ದು ಎಷ್ಟು ದಿನದಿಂದ ವಾಸವಾಗಿದ್ದಾರೆ ನನಗೆ ಗೊತ್ತಿಲ್ಲ. ಏಕಪಕ್ಷೀಯ ಆದೇಶದ ಮಾಹಿತಿಯನ್ನು ನನಗೆ ಯಾವ ದಿನಕೊಟ್ಟರು ಹೇಳಲು ಬರುವುದಿಲ್ಲ. ಈ ದಿನ ನ್ಯಾಯಾಲಯಕ್ಕೆ ನಾನು ಒಬ್ಬಳೇ ಬಂದಿರುತ್ತೇನೆ. ಈ ದಿನ ನ್ಯಾಯಾಲಯಕ್ಕೆ ನನ್ನನ್ನು 1 ನೇ ಪ್ರತಿವಾದಿಯ ಅಧಿಕಾರ ಪತ್ರದ ಪಡೆದ ನಿರ್ಮಲ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ನಾನು ನಿರ್ಮಲ ಜೊತೆ ನ್ಯಾಯಾಲಯಕ್ಕೆ ಬಂದಿದ್ದರು ಸಹಿತ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನ್ನ ಪ್ರತಿವಾದ ಪತ್ರದಲ್ಲಿರುವ ವಿಷಯವನ್ನು ನಾನೇ ಹೇಳಿ ಬರೆಸಿರುತ್ತೇನೆ. ನಮ್ಮ ತಾಯಿ 1 ನೇ ಪ್ರತಿವಾದಿಗೆ ವಿಲ್ ಮಾಡಿದ್ದನ್ನು ನನಗೆ ನನ್ನ ತಾಯಿಯ ಮರಣಾನಂತರದ ಕಾರ್ಯದ ಸಮಯದಲ್ಲಿ ಗೊತ್ತಾಗಿರುತ್ತದೆ. 2008 ರಲ್ಲಿ ವಿಲ್‌ನ ವಿಷಯ ಗೊತ್ತಾಗಿದೆ ಎಂದು

ಹೇಳಿದ್ದು, ವಾದಿಯಿಂದ ಈ ದಾವಾ ಪೂರ್ವ ನೋಟಿಸು ಬಂದಾಗ ಉತ್ತರ ನೋಟಿಸು ಮುಖಾಂತರ ಈ ವಿಷಯ ತಿಳಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿದಾರರು ನೋಟಿಸು ನನ್ನ ಮಕ್ಕಳ ಕೈಗೆ ಸೇರಿದ್ದು ಅವರು ನನಗೆ ಕೊಟ್ಟಿರುವುದಿಲ್ಲ ಎಂದು ಹೇಳುತ್ತಾರೆ ಈ ವಿಷಯವನ್ನು ನಾನು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿರುವುದಿಲ್ಲ. ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ವಿಲ್ ನ್ನು ನಾನು, ವಿಶಾಲಾಕ್ಷಮ್ಮ ಹಾಗೂ 4 ನೇ ಪ್ರತಿವಾದಿ ನೋಡಿ ಓದಿರುತ್ತೇವೆ. ವಿಲ್ ನ ವಿಷಯವನ್ನು ನಾನು 1 ಮತ್ತು 2 ನೇ ಪ್ರತಿವಾದಿಯರಿಗೆ ಹಾಗೂ ವಾದಿಗೆ ತಿಳಿಸಿರುತ್ತೇನೆ. ಸದರಿ ವಿಲ್ ನ್ನು ನಾವು 1 ನೇ ಪ್ರತಿವಾದಿಗೆ ಕೊಟ್ಟಿರುತ್ತೇವೆ. ಈ ವಿಷಯವನ್ನು ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿರುವುದಿಲ್ಲ. ಈ ವಿಷಯವನ್ನು ಇದೇ ಮೊದಲಬಾರಿ ಹೇಳುತ್ತಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಈ ವಿಷಯ ಎಲ್ಲಾರಿಗೂ ತಿಳಿದಿತ್ತು ಎಂದು ಹೇಳುತ್ತಾರೆ. ವಿಲ್‌ನ್ನು ವಕೀಲರಾದ ಶ್ರೀ ಚಂದ್ರಶೇಖರ್ ರವರು ಬರೆದಿದ್ದು ಅದಕ್ಕೆ ಬಸವಣ್ಣ ಹಾಗೂ ಇನ್ನೊಬ್ಬರು ಸಾಕ್ಷಿದಾರರಾಗಿರುತ್ತಾರೆ. ತನ್ನ ಹೆಸರಿಗೆ ವಿಲ್ ಬರೆದ ವಿಷಯ ನಾವು ಹೇಳುವ ಪೂರ್ವದಲ್ಲಿ 1 ನೇ ಪ್ರತಿವಾದಿಗೆ ಗೊತ್ತಿತ್ತು. ವಿಲ್ ಮೇರೆಗೆ ದಿಃ 11.07.2016 ರಂದು ಖಾತೆಯಾಗಿರುತ್ತದೆ. 1 ನೇ ಪ್ರತಿವಾದಿ ತನ್ನ ಹೆಸರಿಗೆ ಅದ ಖಾತೆಯನ್ನು ತೋರಿಸಿರುತ್ತಾರೆ. ಈ ಪ್ರಕರಣ ದಾಖಲಾಗುವ ಮೊದಲು

ತೋರಿಸಿರುತ್ತಾರೆ. ವಿಲ್ ಮೇರಗೆ ಖಾತೆಯಾಗುವ ಸಲುವಾಗಿ ತಾಲೂಕು ಕಚೇರಿಗೆ ಹೋಗಿ ನಾನು ಒಪ್ಪಿಗೆ ಸಹಿ ಮಾಡಿರುವುದಿಲ್ಲ. 1 ನೇ ಪ್ರತಿವಾದಿ ವಿಲ್ ನ್ನು ಸೃಷ್ಟಿಸಿಕೊಂಡು ತನ್ನ ಹೆಸರಿಗೆ ಖಾತೆ ಮಾಡಿಕೊಂಡಿದ್ದು ನಾನು 1 ನೇ ಪ್ರತಿವಾದಿ ಜೊತೆ ಶಾಮಿಲಾಗಿರುತ್ತೇನೆ ಎಂದರೆ ಸರಿಯಲ್ಲ.

4. ನನ್ನ ತಾಯಿ ಮರಣ ಹೊಂದುವ ಸಮಯದಲ್ಲಿ ಸುಮಾರು 80 ವರುಷ ವಯಸ್ಸಾಗಿತ್ತು. ನನ್ನ ತಾಯಿಗೆ ಹೃದಯ ಸಂಬಂದಿ ಖಾಯಿಲೆ ಇತ್ತು ಎಂದರೆ ಸರಿ. ನನ್ನ ತಾಯಿ ಹೊರಗೆ ಓಡಾಡುತ್ತಿರಲಿಲ್ಲ ಎಂದರೆ ಸರಿ. ನನ್ನ ತಾಯಿ ಮಾನಸಿಕ ಮತ್ತು ದೈಹಿಕವಾಗಿ ಸದೃಡರಾಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಮರಣ ಪೂರ್ಣ ವಿಲ್ ನ್ನು ಬರೆದಿಲ್ಲ ಮತ್ತು ಅದಕ್ಕೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನಿಜಸ್ಥಿತಿ ಗೊತ್ತಾಗುತ್ತದೆ ಅಂತ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯುತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರ ಆರೋಗ್ಯ ಸರಿ ಇಲ್ಲ ಎಂದು ಹೇಳುತ್ತಾರೆ. ಈಗ 7-8 ತಿಂಗಳ ಹಿಂದೆ 1 ನೇ ಪ್ರತಿವಾದಿ ನಮ್ಮ ಮನೆಗೆ ಬಂದಿದ್ದರು. ವಾದಿ ಕೂಡಾ ನಮ್ಮ ಮನೆಗೆ ಬಂದು ಹೋಗಿ ಮಾಡಿರುತ್ತಾರೆ. 1 ನೇ ಪ್ರತಿವಾದಿ ನನಗೆ ಆತ್ಮೀಯರಾಗಿದ್ದರಿಂದ ನಾನು ಅವರ ಪರವಾಗಿ ಅವರಿಗೆ ಸಹಾಯವಾಗಲೆಂದು ಪ್ರತಿವಾದ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಿಲ್ ಬಗ್ಗೆ ನನಗೆ ಮಾಹಿತಿ

ಇಲ್ಲದಿದ್ದರೂ 1 ನೇ ಪ್ರತಿವಾದಿ ಹೇಳಿಕೆ ಮೇರೆಗೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು,**

**ತಿ.ನರಸೀಪುರ**